ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ – 583201
OFFICE OF THE DEPUTY COMMISSIONER, VIJAYANAGARA DISTRICT, HOSAPETE

Tel: 08394-295655 Email :vijayanagaradc@gmail.com

## ನಡವಳಿಗಳು

**ವಿಷಯ:-** ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲೂಕು ತೆಲಿಗಿ ಹೋಬಳಿ ಗುಂಡಗತ್ತಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನಕ್ಕೆ ತಾತ್ಕಾಲಿಕವಾಗಿ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ

**ಉಲ್ಲೇಖ :** 1.ಸಹಾಯಕ ಆಯುಕ್ತರು, ಹಿಂ ಧಾ ದ ಇಲಾಖೆ ವಿಜಯನಗರ ಜಿಲ್ಲೆ ಇವರ ಪತ್ರ ಸಂಖ್ಯೆ ಸಂ:ಸಿಆರ್‌ಡಿಸಿ/24/2025-26 ದಿನಾಂಕ 25-02-2026

2.ತಹಶೀಲ್ದಾರರು, ಹರಪನಹಳ್ಳಿ ಇವರ ಪತ್ರ ಸಂಖ್ಯೆ ಸಂ/ಕಂ/ಡಿವಿಎಸ್/ಸಿಆರ್/04/2025-26 ದಿನಾಂಕ 10-02-2026

*******

**ಪೀಠಿಕೆ**

ಉಲ್ಲೇಖಿತ (2) ರಲ್ಲಿ ತಹಶೀಲ್ದಾರರು ಹರಪನಹಳ್ಳಿ ಇವರು ಹರಪನಹಳ್ಳಿ ತಾಲೂಕು ತೆಲಿಗಿ ಹೋಬಳಿ ಗುಂಡಗತ್ತಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಗ-ನಾಣ್ಯ ಮತ್ತು ಬೆಳ್ಳಿ ಇತ್ಯಾದಿ ವಸ್ತುಗಳನ್ನು ಹಾಗೂ ಆದಾಯ ದುರಪಯೋಗ ಮಾಡುತ್ತಿರುವ ಬಗ್ಗೆ ದೂರು ನೀಡಿರುವ ಪ್ರಯುಕ್ತ ಹಾಗೂ ಜಾತ್ರೆ ಇರುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಮತ್ತು ಭದ್ರತೆ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ಹಣ ದುರುಪಯೋಗ ಆಗದೇ ಇರುವ ಹಿತದೃಷ್ಟಿಯಿಂದ ಸದರಿ ದೇವಸ್ಥಾನಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಕುರಿತು ಉಲ್ಲೇಖಿತ (1) ರಲ್ಲಿ ಸಹಾಯಕ ಆಯುಕ್ತರು, ಹಿಂ ಧಾ ಸಂ ಧ ದ ಇಲಾಖೆ ವಿಜಯನಗರ/ಬಳ್ಳಾರಿ ರವರು ಹರಪನಹಳ್ಳಿ ತಾಲೂಕು ತೆಲಿಗಿ ಹೋಬಳಿ ಗುಂಡಗತ್ತಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಸುಗಮ ಆಡಳಿತ ನಿರ್ವಹಣೆಗಾಗಿ ಮತ್ತು ಮುಜರಾಯಿ ಇಲಾಖೆಗೆ ಸೇರಿಸಲು ಸರ್ಕಾರ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಆದೇಶದ ನಿರೀಕ್ಷಣೆ ಮೇರೆಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲು ಕೋರಿರುವ ಕಾರಣ ಈ ಕೆಳಗಿನಂತೆ ಆದೇಶ

ಸಂ/ಕಂ/ಡಿವಿಎಸ್/ಸಿಆರ್/168/2025-26 ದಿನಾಂಕ : 20-03-2026

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ತಹಶೀಲ್ದಾರರು ಹರಪನಹಳ್ಳಿ ಮತ್ತು ಸಹಾಯಕ ಆಯುಕ್ತರು, ಹಿಂ, ಧಾ ದ ಇಲಾಖೆ ವಿಜಯನಗರ/ಬಳ್ಳಾರಿ ಇವರ ವರದಿ ಅನ್ವಯ ಈ ಕೆಳಗಿನ ದೇವಸ್ಥಾನದ ಆಡಳಿತ ನಿರ್ವಹಣೆ ಮತ್ತು ಲೆಕ್ಕ ನಿರ್ವಹಣೆಗಾಗಿ 06 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದು ಮೊದಲು ಅಲ್ಲಿಯವರೆಗೆ ಈ ಕೆಳಗಿನ ಷರತ್ತುಗೊಳಪಡಿಸಿ ಆಡಳಿತಾಧಿಕಾರಿಗಳನ್ನು ನೇಮಿಸಿ ಆದೇಶಿಸಿದೆ.

Scanned with OKEN Scanner

**ಷರತ್ತುಗಳು**:

1. ದೇವಸ್ಥಾನದ ಆಡಳಿತ ನಿರ್ವಹಣೆ, ಲೆಕ್ಕಪತ್ರ ನಿರ್ವಹಣೆ, ಆದಾಯ ಕ್ರೋಡೀಕರಣ ಮಾಡುವ ಜವಾಬ್ದಾರಿ ಆಡಳಿತಾಧಿಕಾರಿಗಳದ್ದಾಗಿರುತ್ತದೆ.
2. ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರಿಗಳಿಂದ ಮಂಜೂರಾತಿ ಪಡೆಯುವುದು.
3. ವಾರ್ಷಿಕ ಜಮಾ ಖರ್ಚಿನ ಪಟ್ಟಿ ಹಾಗೂ ಮುಂಗಡ ಪತ್ರ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆಯತಕ್ಕದ್ದು.
4. ಚರ/ಸ್ಥಿರ ಆಸ್ತಿಯ ಪೂರ್ಣ ಚಾರ್ಜು ಪಡೆಯತಕ್ಕದ್ದು.
5. ಬ್ಯಾಂಕ್ ಮುಖಾಂತರ ದೇವಸ್ಥಾನದ ದೈನಂದಿನ ವ್ಯವಹಾರ ನಡೆಸುವುದು.
6. ಈ ಕೂಡಲೇ ಚಾರ್ಜ ತೆಗೆದುಕೊಂಡು, ತೆಗೆದುಕೊಂಡ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸತಕ್ಕದ್ದು.

| ಕ್ರ.ಸಂ | ದೇವಸ್ಥಾನದ ಹೆಸರು ಮತ್ತು ಗ್ರಾಮ ಹೆಸರು | ಆಡಳಿತಾಧಿಕಾರಿಯಾಗಿ ನೇಮಿಸಿದ ಅಧಿಕಾರಿ |
|---|---|---|
| 1 | ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ಗುಂಡಗತ್ತಿ ಗ್ರಾಮ | ಕಂದಾಯ ನಿರೀಕ್ಷಕರು ತೆಲಗಿ ಹೋಬಳಿ ಹರಪನಹಳ್ಳಿ ತಾಲೂಕು |

**ಜಿಲ್ಲಾಧಿಕಾರಿಗಳು**
**ವಿಜಯನಗರ ಜಿಲ್ಲೆ**
**ಹೊಸಪೇಟೆ**

**ಯಥಾ ನಕಲು ಈ ಕೆಳಗಿನವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ:**

1. ಸಹಾಯಕ ಆಯುಕ್ತರು, ಹರಪನಹಳ್ಳಿ ಉಪವಿಭಾಗ, ಹರಪನಹಳ್ಳಿ
2. ಸಹಾಯಕ ಆಯುಕ್ತರು, ಹಿಂ.ಧಾ.ಸಂ.ಧ.ದ. ಇಲಾಖೆ ವಿಜಯನಗರ/ಬಳ್ಳಾರಿ
3. ತಹಶೀಲ್ದಾರರು, ಹರಪನಹಳ್ಳಿ
4. ಕಂದಾಯ ನಿರೀಕ್ಷಕರು ತೆಲಗಿ ಹೋಬಳಿ ಹರಪನಹಳ್ಳಿ ತಾಲೂಕು

ಪ್ರತಿಯನ್ನು

1. ಆಯುಕ್ತರು ಹಿಂ.ಧಾ.ಸಂ.ಧ.ದ. ಇಲಾಖೆ ಬೆಂಗಳೂರು ಇವರ ಘನ ಮಾಹಿತಿಗಾಗಿ ಸಲ್ಲಿಸಿದೆ

Scanned with OKEN Scanner